ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ,ಯಾದಗಿರಿ.

**Crl Misc No. 1272/2024**
**RW : 1**

ದಿನಾಂಕಃ 22-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಪ್ರದೀಪ |
| ತಂದೆ/ಗಂಡನ ಹೆಸರುಃ | ನೀಲಕಂಠ |
| ವಯಸ್ಸುಃ | 27 ವರ್ಷ |
| ಉದ್ಯೋಗಃ | ಕೂಲಿಕೆಲಸ |
| ವಾಸ ಸ್ಥಳಃ | ಗುಲ್ಬರ್ಗಾ |

ಮುಖ್ಯ ವಿಚಾರಣೆ ಎದುರುದಾರ ಪರವಾಗಿಃ ಶ್ರೀ . ಎಚ್ ಎಮ್ ಪಿ. ವಕೀಲರಿಂದಃ

1. ಅರ್ಜಿದಾರಳು ನನ್ನ ಹೆಂಡತಿ. ನನ್ನ ಮತ್ತು ಎದುರುದಾರಳ ಮದುವೆ ಸನಃ 2023 ರಲ್ಲಿ ಗದ್ಲೆಗಾವ್ ಕಲಬುರ್ಗಿಯಲ್ಲಿ ಆಗಿರುತ್ತದೆ. ಮದುವೆಯ ಖರ್ಚನ್ನು ನನ್ನ ತಂದೆ-ತಾಯಿ ನೋಡಿಕೊಂಡಿರುತ್ತಾರೆ. ಅರ್ಜಿದಾರಳ ಕಡೆಯಿಂದ ಯಾವುದೇ ವರದಕ್ಷಿಣೆ ಪಡೆದುಕೊಂಡಿರುವುದಿಲ್ಲ. ಸದರಿ ಅರ್ಜಿದಾರಳು ಹೊಸ ಸಂಬಂಧ ಇರುತ್ತದೆ. ನನ್ನ ಹೆಸರಿನಲ್ಲಿ ಯಾವುದೇ ಮನೆ, ಜಮೀನು ಇರುವುದಿಲ್ಲ. ಕೂಲಿ ಕೆಲಸದಿಂದ ತಿಂಗಳಿಗೆ 7 ರಿಂದ 8 ಸಾವಿರ ರೂ. ಸಂಬಳ ಬರುತ್ತದೆ. ಸದರಿ ಕೂಲಿ ಕೆಲಸಕ್ಕೆ ಕರೆದಾಗ ಹೋಗುತ್ತೇನೆ.

2. ಮದುವೆಯಾದ ನಂತರ 3 ತಿಂಗಳ ಕಾಲ ಅರ್ಜಿದಾರಳು ಸುಖವಾಗಿ ಸಂಸಾರ ನಡೆಸಿರುತ್ತಾಳೆ. ಸದರಿ ಅರ್ಜಿದಾರಳು ತನ್ನ ತವರು ಮನೆಗೆ ಹೋಗಿ ವಾಪಸ ಬಂದಿರುವುದಿಲ್ಲ. ಸದರಿ ನಾನು ಕರೆ ಮಾಡಿ ಕರೆದರೂ ಕೂಡ ಬಂದಿರುವುದಿಲ್ಲ. ಅರ್ಜಿದಾರಳು ನನಗೆ ಫೋನ್ ಕರೆ ಮಾಡಿ ನನಗೆ ಹೊಂದಿಕೊಳ್ಳಲು ಆಗುವುದಿಲ್ಲ ಎಂದು ಹೇಳಿರುತ್ತಾಳೆ. ನಾನು ಕೆಲಸದ ಕರ್ತವ್ಯದಲ್ಲಿ ಇದ್ದೆ. ನಂತರ 10-15 ದಿನಗಳ ಬಳಿಕ ಅರ್ಜಿದಾರಳ ಮನೆಯವರು ಬಂದು ಅರ್ಜಿದಾರಳಿಗೆ ಈ ಮದುವೆ ಇಷ್ಟ ಇರುವುದಿಲ್ಲ ಎಂದು ಹೇಳಿರುತ್ತಾಳೆ. ನ್ಯಾಯಪಂಚಾಯತಿ ಮಾಡಿ ಅರ್ಜಿದಾರಳಿಗೆ ಜೀವನೋಪಾಯಕ್ಕೆ ಏನಾದರೂ ಕೊಡಬೇಕು ಎಂದು ಹೇಳಿರುತ್ತಾರೆ.

ಮದುವೆ ಮಾಡಿ ಸಾಲ ಆಗಿರುವುದರಿಂದ ನನ್ನ ತಂದೆ-ತಾಯಿ ಏನೂ ಕೊಡಲು ಸಾಮರ್ಥ್ಯ ಇರುವುದಿಲ್ಲ ಎಂದು ಹೇಳಿರುತ್ತಾರೆ. ಅರ್ಜಿದಾರಳು ನನಗೆ ಎರಡು ಸಲ ನನ್ನ ಮನೆಗೆ ಬೇರೆ-ಬೇರೆಯವರನ್ನು ಕರೆದುಕೊಂಡು ಬಂದು ಕಿರುಕುಳ ನೀಡಿರುತ್ತಾಳೆ. ನನ್ನ ತಂದೆ-ತಾಯಿಗೆ ಒಟ್ಟು 4 ಜನ ಮಕ್ಕಳು. ನಾನು ಬೆಂಗಳೂರಿನಲ್ಲಿ ಒಬ್ಬನೇ ಇರುತ್ತೇನೆ. ನಾನು ಬಾಡಿಗೆ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸವಿರುತ್ತೇನೆ. ಊಟದ ಎಲ್ಲಾ ಖರ್ಚುಗಳನ್ನು ನಾನೇ ನೋಡಿಕೊಳ್ಳುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಅರ್ಜಿದಾರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ